ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್.976/2021

| | | | |
|---|---|---|---|
| ಸಾಕ್ಷಿಯ ಹೆಸರು | : ಮಮತಾ | ಸಿ.ಡಬ್ಲ್ಯು | 2 |
| ಗಂಡನ ಹೆಸರು | : ಗೋಪಾಲ | ಪಿ.ಡಬ್ಲ್ಯು | 5 |
| ವಯಸ್ಸು | : 45 ವರ್ಷ | | |
| ಉದ್ಯೋಗ | : ಗೃಹಿಣಿ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕಃ20.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾಸ-1 ನನ್ನ ಗಂಡ, ಬಸಪ್ಪ ಮತ್ತು ಸೀತಮ್ಮ ಇವರ ಪರಿಚಯ ಇಲ್ಲ. 1 ನೇ ಆರೋಪಿ ನನ್ನ ಗಂಡನ ಅಣ್ಣ ಇರುತ್ತಾನೆ ಮತ್ತು ಉಳಿದ ಆರೋಪಿತರು ನನ್ನಗಂಡನ ಅಣ್ಣನ ಕುಟುಂಬದ ಸದಸ್ಯರು ಇರುತ್ತಾರೆ. 2020 ನೇ ಸಾಲಿನಲ್ಲಿ ಆಟೋದ ಮೇಲಿನ ಟಾರ್ಪಲ್ ಹರಿದ ವಿಚಾರವಾಗಿ ನನ್ನ ಗಂಡ ಮತ್ತು ಆರೋಪಿತರ ನಡುವೆ ಬಾಯಿ ಮಾತಿನ ತಕರಾರುಗಳು ಆಗಿದ್ದವು, ನಮಗೂ ಮತ್ತು ಅವರಿಗೂ ಯಾವುದೇ ಜಗಳ ಆಗಿಲ್ಲ. ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಬಂದು ನನಗಾಗಲೀ ನನ್ನ ಗಂಡನಿಗಾಗಲೀ ಯಾವುದೇ ರೀತಿ ಬೈದಿರುವುದಿಲ್ಲ, ಹೊಡೆ ಬಡೆ ಮಾಡಿರುವುದಿಲ್ಲ ಮತ್ತು ಜೀವದ ಬೆದರಿಕೆಯನ್ನು ಕೂಡ ಹಾಕಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರಿಗೆ ಹೇಳಿಕೆಯನ್ನು ಸಹ ಕೊಟ್ಟಿರುವುದಿಲ್ಲ. ನಾನು ನ್ಯಾಯಾಧೀಶರ ಮುಂದೆ ಕೂಡ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿನಾಂಕ 06.05.2020 ರಂದು ಸಂಜೆ 6 ಗಂಟೆಯ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಮನೆಯಲ್ಲಿದ್ದಾಗ ಆಟೋ ಮೇಲಿನ ಟಾರ್ಪಲ್ ಹರಿದಿರುವುದನ್ನು ಕಂಡು, ಯಾರು ಹರಿದಿದ್ದಾರೆ ಎಂದು ನನ್ನ ಗಂಡ ನನ್ನನ್ನು ಕೇಳುತ್ತಿದ್ದಾಗ ಆರೋಪಿಗಳು ಅಕ್ರಮ ಕೂಟ ರಚಿಸಿಕೊಂಡು ನಮ್ಮ ಮನೆಯ ಹತ್ತಿರ ಬಂದರು ಎಂದರೆ ಸರಿಯಲ್ಲ. ಅವರು ನನ್ನ ಗಂಡನನ್ನು ಕುರಿತು ಅವಾಚ್ಯವಾಗಿ ಬೈಯ್ದು ಜೀವದ ಬೆದರಿಕೆ ಹಾಕಿದರು, ಕಲ್ಲಿನಿಂದ ಅವರ ಹಣೆಗೆ ಹೊಡೆದು ಗಾಯಗೊಳಿಸಿದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ನಾನು ಹೋದಾಗ 3 ರಿಂದ 5 ನೇ ಆರೋಪಿತರು ಸೇರಿ

ಅವಾಚ್ಯವಾಗಿ ಬೈಯ್ದು, ನನ್ನ ಮೈಮೇಲಿನ ನೈಟಿಯನ್ನು ಹರಿದು ಹಾಕಿ ಅವಮಾನಗೊಳಿದರು ಎಂದರೆ ಸರಿಯಲ್ಲ. ಈ ರೀತಿ ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಮತ್ತು ನ್ಯಾಯಾಧೀಶರ ಮುಂದೆ ಕೂಡ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ 1 ನೇ ಆರೋಪಿ ನನ್ನ ಗಂಡನ ಸಹೋದರ ಇರುವ ಕಾರಣ ಊರಿನ ಪ್ರಮುಖರ ಸಲಹೆಯಂತೆ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-6 ಮತ್ತು ನ್ಯಾಯಾಧೀಶರ ಮುಂದೆ ಕೊಟ್ಟ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.